## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**- 444/2022 **DW**-1

**ದಿಃ 16.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**(ದಿಃ02.09.2023 ಮತ್ತು 09.01.2023 ರಂದು ಸಲ್ಲಿಸಿದ ಮೆಮೋಗಳ ಮೇಲೆ ವಿಚಾರಣೆ)**

**ಮುಖ್ಯ ವಿಚಾರಣೆಃ 1 ನೇ ಪ್ರತಿವಾದಿ ಪರ ಶ್ರೀ ಡಿ ಡಿ ಡಬ್ಲು ವಕೀಲರಿಂದಃ**

ನಾನು ಈ ದಾವೆಯಲ್ಲಿ 1 ನೇ ಪ್ರತಿವಾದಿಯಾಗಿದ್ದು, ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

**ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ವಿ ಆರ್ ವಕೀಲರಿಂದಃ**

ನನಗೆ ಆಂಗ್ಲ ಬಾಷೆ ಬರುವದಿಲ್ಲ ಬದಲಿಗೆ ಕನ್ನಡ ಬಾಷೆ ಬರುತ್ತದೆ. ಈ ದಿನ ನ್ಯಾಯಾಲಯಕ್ಕೆ ಬರುವ ರೀತಿ ಈ ಹಿಂದೆ 5-6 ಬಾರಿ ನ್ಯಾಯಾಲಯಕ್ಕೆ ಬಂದು ಹೋಗಿರುತ್ತೇನೆ. ಈ ಹಿಂದೆ ಈ ರೀತಿ 5-6 ಬಾರಿ ಬಂದಾಗ ಈಗ ತೋರಿಸುತ್ತಿರುವ ರೀತಿ ಮೆಮೋ ಮತ್ತು ಆಧಾರ ಕಾರ್ಡನ್ನು ಸಲ್ಲಿಸಿರುತ್ತೇನೆ ಆದರೆ ನನಗೆ ಆಂಗ್ಲ ಬಾಷೆ ಬರುವದಿಲ್ಲ. ಸಾಕ್ಷಿಯು ಗುರುತಿಸಿದ ದಾಖಲೆಯು ಮೆಮೋ ದಿನಾಂಕಃ09.01.2023 ರ ದಾಖಲೆಯಾಗಿರುತ್ತದೆ. ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಮೆಮೋವಿಗೆ ನಾನು ಮಾಹಿತಿಯನ್ನು ಕೊಟ್ಟಿಲ್ಲ ನನ್ನ ಹೆಣ್ಣು ಮಕ್ಕಳೇ ಸದರಿ ಮಾಹಿತಿಯನ್ನು ವಕೀಲರಿಗೆ ಕೊಟ್ಟಿರುತ್ತಾರೆ. ಸಾಕ್ಷಿಗೆ ಮತ್ತೊಂದು ದಾಖಲೆ ತೋರಿಸಿ ಈ ಮೆಮೋವನ್ನು ಯಾರು ಸಲ್ಲಿಸಿರುತ್ತಾರೆಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ದಾಖಲೆಯು ದಿನಾಂಕಃ02.09.2023 ಸಲ್ಲಿಸಿದ ಮೆಮೋ ಆಗಿರುತ್ತದೆ. ಸಾಕ್ಷಿಗೆ ಸದರಿ ಮೆಮೋವನ್ನು ತೋರಿಸಿ ಅದರಲ್ಲಿರುವ ವಿಚಾರವನ್ನು ಕೇಳಲಾಗಿ ಸಾಕ್ಷಿಯು ಮೆಮೋವನ್ನು ಅದರಲ್ಲಿರುವ ಅಂಶಗಳನ್ನು ಪುನರುಚ್ಚಾರ ಮಾಡಿರುತ್ತಾರೆ. ಸದರಿ ಮೆಮೋದಲ್ಲಿ ಇಂಗ್ಲಿಷ ಪದಗಳು ಸಹ ಇವೆ ಎಂದರೆ ಸಾಕ್ಷಿಯು ಕಷ್ಟಕರವಾದ ಇಂಗ್ಲೀಷ ಪದಗಳು ಬರುವದಿಲ್ಲ ಹಾಗೂ ಅದರ ಅರ್ಥ ತಿಳಿಯುವದಿಲ್ಲ ಎನ್ನುತ್ತಾರೆ. ಈ ಮೆಮೋವನ್ನು ಸಲ್ಲಿಸಲು ನನ್ನ ಹೆಣ್ಣು ಮಕ್ಕಳು ಯಾವ ರೀತಿ ಮನಸ್ಸನ್ನು ಬದಲಾಯಿಸಿದರೆಂದು ನನಗೆ ಗೊತ್ತಿಲ್ಲ. ವಾದಿಯರು ನನ್ನ ಸ್ವಂತ ಮಕ್ಕಳು ಆಗಿರುತ್ತಾರೆ.

ದಿಃ09.01.2023 ಹಾಗೂ ದಿಃ02.09.2023 ರಲ್ಲಿ ನನ್ನ ಮನಸ್ಥಿತಿ ಯಾವ ರೀತಿ ಇತ್ತು ಎಂದು ಹೇಳಲು ಬರುವದಿಲ್ಲ. ದಿಃ02.09.2023 ರಲ್ಲಿ ಉಲ್ಲೇಖಿಸಿರುವ ರೀತಿ ಮೆಮೋ ಸಲ್ಲಿಸಬೇಕೆಂದು ನನಗೆ ಯಾವಾಗ ಅನಿಸಿತು ಎಂದು ಹೇಳಲು ಬರುವದಿಲ್ಲ. ದಿಃ09.01.2023 ರಂದು ಸಲ್ಲಿಸಿದ ಮೆಮೋದಲ್ಲಿ ಹೆಣ್ಣು ಮಕ್ಕಳಿಗೂ ಹಕ್ಕು ಬರಬೇಕೆಂದು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಈ ರೀತಿ ಮೆಮೋ ಸಲ್ಲಿಸಿದ ಕಾರಣ ತಾವು ಕೈಪಿಯತ್ತನ್ನು ಹಾಕಲು ಬರುವದಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ವಾರಂಗ ವಕೀಲರನ್ನು ಮಾತ್ರ ನೇಮಕ ಮಾಡಿಕೊಂಡಿದ್ದು ಬೇರೆ ಯಾರನ್ನು ನೇಮಕ ಮಾಡಿಕೊಂಡಿದ್ದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ದಿಃ09.01.2023 ರಂದು ಸಲ್ಲಿಸಿದ ವಕಾಲತ್ತನ್ನು ತೋರಿಸಿದ್ದು ಅದರಲ್ಲಿರುವ ಸಹಿಯನ್ನು ಗುರುತಿಸಿರುತ್ತಾರೆ. ದಿಃ02.09.2023 ರಂದು ಸಲ್ಲಿಸಿದ ವಕಾಲತ್ತನ್ನು ಸಹ ಸಾಕ್ಷಿಗೆ ತೋರಿಸಿ ಅದರಲ್ಲಿರುವ ಸಹಿಯನ್ನು ಕೇಳಲಾಗಿ ಗುರುತಿಸಿರುತ್ತಾರೆ ಇದನ್ನು ಯಾವ ವಕೀಲರಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ನನಗೆ ಇಂಗ್ಲೀಷ ಬರದ ಕಾರಣ ಗೊತ್ತಾಗುವದಿಲ್ಲ ಎನ್ನುತ್ತಾರೆ. ನನ್ನ ಆಧಾರ ಕಾರ್ಡ ನನ್ನ ಬಳಿಯೇ ಇರುತ್ತದೆ. ಮೊಬೈಲನಲ್ಲಿ ನನ್ನ ಆದಾರ ಕಾರ್ಡ ಇರುತ್ತದೆ ಅದನ್ನು ತೆಗೆದುಕೊಂಡಿರಬಹುದು. ಮೊಬೈಲ ಸಹ ನನ್ನ ಬಳಿಯೇ ಇರುತ್ತದೆ. ವಾರಂಗ ವಕೀಲರಿಗೆ ಕೇಸನ್ನು ಕೊಡುವ ಪೂರ್ವದಲ್ಲಿ ಯಾವ ವಕೀಲರಿಗೆ ನನ್ನ ಪರವಾಗಿ ಕೇಸು ನಡೆಸಲು ವಕಾಲತ್ತನ್ನು ಕೊಟ್ಟಿದ್ದೆ ಎಂದು ಗೊತ್ತಿಲ್ಲ. ನನ್ನ ಗಂಡನಿಗೆ ನನ್ನನ್ನು ಸೇರಿಸಿ ಒಟ್ಟು ಐದು ಜನ ವಾರಸಾದಾರರು ಇರುತ್ತಾರೆ. ತಾವು ದಿಃ09.01.2023 ರಂದು ಸಲ್ಲಿಸಿದ ಮೆಮೋದಲ್ಲಿ ಈ ವಿಚಾರವನ್ನು ಒಪ್ಪಿ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯು ಅಳುತ್ತಾ ಮೌನವಾಗಿರುತ್ತಾರೆ. ತಮಗೆಲ್ಲಾ ಮಾಹಿತಿ ಇದ್ದರೂ ಸಹ ತಾವು ಸುಳ್ಳು ಮೆಮೋವನ್ನು ದಿಃ02.09.2023 ರಂದು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಆದಕಾರಣ ಅದನ್ನು ವಜಾ ಮಾಡಲು ಅರ್ಹವಾಗಿರುತ್ತದೆಂದರೆ ಸಾಕ್ಷಿಯು ತಮ್ಮ ವಕೀಲಿ ಬಾಷೆ ತಿಳಿಯುತ್ತಿಲ್ಲ ಎನ್ನುತ್ತಾರೆ. ತಮಗೆ ಓದಲು ಬರೆಯಲು ಎಲ್ಲಾ ಬರುತ್ತಿದ್ದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.